ಕರ್ನಾಟಕ ಸರ್ಕಾರ

ಸಂ.ಡಿಟಿಇ/04/ಎಸ್‌ಸಿಹೆಚ್(1)/2012-13
**ಅಡಕ: 54 Unique Name Entry Format** ಅತಿ ಜರೂರು

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು-560 001.
ದಿನಾಂಕ: 23-01-2013.

## -:: ಸುತ್ತೋಲೆ ::-

**ವಿಷಯ:-** ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಂದ ಅನುಬಂಧದಲ್ಲಿ ಸೂಚಿಸಿರುವ ಮಾಹಿತಿಯನ್ನು **epass-template** ಗಾಗಿ ಕೂಡಲೆ ಒದಗಿಸುವ ಬಗ್ಗೆ.

**ಉಲ್ಲೇಖ:-**
1. ದಿನಾಂಕ: 14-12-2012ರಂದು Hot Mail(E-Mail) ಮೂಲಕ ಕಳುಹಿಸಿರುವ ಪತ್ರ.
2. ಇದೇ ಸಮ ಸಂಖ್ಯೆಯ ದಿನಾಂಕ: 15-12-2012 ಮತ್ತು 19-12-2012.
3. ಸರ್ಕಾರದ ಸೂತ್ತೋಲೆ ಸಂಖ್ಯೆ: ED 115 MAHITI 2012, D: 17-12-2012.

-00000000-

**2012-13**ನೇ ಸಾಲಿಗೆ ನಿಮ್ಮ ಸಂಸ್ಥೆಯಲ್ಲಿ ಸಿ.ಇ.ಟಿ ಮುಖಾಂತರ ವೃತ್ತಿಪರ ಕೋರ್ಸ್‌ಗಳಿಗೆ ಆಯ್ಕೆಯಾಗಿರುವ ಪ್ರಥಮ, ಎರಡನೆ, ಮೂರನೆ ಮತ್ತು ನಾಲ್ಕನೆ ವರ್ಷದಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳ ಈ ಕೆಳಗೆ ಸಂಬಂಧಿಸಿದ ವರ್ಗ ಮತ್ತು ಯೋಜನೆಗಳಡಿಯಲ್ಲಿ ವ್ಯಾಸಂಗ ಮುಂದುವರಿಸಲು ಪಡೆಯುತ್ತಿರುವ ಸೌಲಭ್ಯವನ್ನು ಇನ್ನೂ ಮುಂದೆ **epass-template** ನಲ್ಲಿ ಅಳವಡಿಸಿ ಸೌಲಭ್ಯವನ್ನು ಮುಂದುವರಿಸಿಕೊಂಡು ಹೋಗುವ ಸಲುವಾಗಿ ಇದರೊಂದಿಗೆ ಲಗತ್ತಿಸಿರುವ **Format** ನಲ್ಲಿ ನೀಡಿರುವ ಪ್ರತಿಯೊಂದು ಅಂಶಕ್ಕೆ ( **Excel-Format ಮಾದರಿಯನ್ನು ಈ ಇಲಾಖೆಯ ವೆಬ್‌ಸೈಟ್‌ನಲ್ಲಿ ಅಳವಡಿಸಲಾಗಿದ್ದು, (Web Site: www.dte.kar.nic.in) ಈ ವೆಬ್‌ಸೈಟ್ ನಿಂದ ಡೌನ್‌ಲೋಡ್ ಮಾಡಿಕೊಳ್ಳಲು ಈ ಮೂಲಕ ತಿಳಿಸಲಾಗಿದೆ** ) ಸೂಕ್ತವಾದ ಹಾಗೂ ನಿಖರವಾದ ಮಾಹಿತಿಯನ್ನು ಪಡೆದು ಈ ಕಛೇರಿಗೆ ಅತಿ ಜರೂರಾಗಿ ಕಳುಹಿಸಿಕೊಡಲು ಈ ಮೂಲಕ ಸೂಚಿಸಿದೆ. ಈ ಮಾಹಿತಿಯನ್ನು ನೀಡದೆ ತಡಮಾಡಿದಲ್ಲಿ ನಿಮ್ಮ ಸಂಸ್ಥೆಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಮುಂದಿನ ಸಾಲಿನಿಂದ ವ್ಯಾಸಂಗ ಮುಂದುವರಿಸಲು ನೀಡುವ ಸೌಲಭ್ಯವನ್ನು ಈ ಇಲಾಖೆಯಡಿಯಲ್ಲಿ ಮಂಜೂರು ಮಾಡಲು ಸಾದ್ಯವಾಗುವುದಿಲ್ಲ ಎಂಬ ಅಂಶವನ್ನು ನಿಮ್ಮಗೆ ತಿಳಿಯಪಡಿಸಲಾಗಿದೆ. ಅದರಿಂದ ಈ ಮಾಹಿತಿ ನೀಡುವ ಕಾರ್ಯವು ಅತಿ ಮುಖ್ಯವೆಂದು ಪರಿಗಣಿಸಿ ಪ್ರಾಂಶುಪಾಲರು ಈ ವಿಷಯದ ಬಗ್ಗೆ ಖುದ್ದಾಗಿ ಹೆಚ್ಚಿನ ಗಮನಹರಿಸಲು ಹಾಗೂ ಮಾಹಿತಿಯನ್ನು ಈ ಕೆಳಕಂಡ ಇ-ಮೇಲ್ ಐ.ಡಿ. ಗೆ ಕೂಡಲೇ ಕಳುಹಿಸಿಕೊಡಲು ಸೂಚಿಸಲಾಗಿದೆ ಹಾಗೂ **ಈಗಾಗಲೇ ಈ ವಿಷಯದ ಬಗ್ಗೆ ಚರ್ಚಿಸಲಾಗಿದ್ದು ದಿ: 31-01-2013 ರ ಒಳಗಾಗಿ ಕಳುಹಿಸಿಕೊಡಲು ತಿಳಿಸಲಾಗಿದೆ, ತಪ್ಪಿದಲ್ಲಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಹಾಗೂ ಇತರೆ ಸೌಲಭ್ಯಗಳು ಕೈಬಿಟ್ಟು ಹೋಗುವ ಸಾಧ್ಯತೆಗಳಿದ್ದು ತಮ್ಮನ್ನೆ ಹೊಣೆಗಾರರನ್ನಾಗಿಸಲಾಗುವುದು.**

**E-Mail ID:- dteacm@hotmail.com**

ವಿದ್ಯಾರ್ಥಿಗಳಿಗೆ ವ್ಯಾಸಂಗಕ್ಕಾಗಿ ನೀಡುವ ಸೌಲಭ್ಯಗಳು(ವರ್ಗ ಮತ್ತು ಯೋಜನೆ):-

1. ಅನುಸೂಚಿತ ಜಾತಿ/ಅನುಸೂಚಿತ ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕ ವಿನಾಯಿತಿ ನೀಡುವ ಬಗ್ಗೆ.
2. ರಕ್ಷಣಾ ಸಿಬ್ಬಂದಿಯ ಮಕ್ಕಳಿಗೆ ಮತ್ತು ಅಶ್ರೀತರಿಗೆ ವಿದ್ಯಾರ್ಥಿ ವೇತನ ನೀಡುವ ಬಗ್ಗೆ.
3. ಬಡತನ ರೇಖೆಗಿಂತ ಕೆಳಗಿರುವ (ಬಿ.ಪಿ.ಎಲ್ ಕಾರ್ಡುದಾರರು) ಕುಟುಂಬದಿಂದ ಬಂದಂತಹ ವಿದ್ಯಾರ್ಥಿಗಳು ಸರ್ಕಾರಿ ಮತ್ತು ಅನುದಾನಿತ ಪದವಿ ಪೂರ್ವ ಕೋರ್ಸ್‌ಗಳಲ್ಲಿ ಶೇ. 80ಕ್ಕಿಂತ ಹೆಚ್ಚು ಅಂಕ ಪಡೆದಿರುವ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾಪುರಸ್ಕಾರ (ಶುಲ್ಕ ಉಚಿತ) ನೀಡುವ ಬಗ್ಗೆ.

ಸಹ ನಿರ್ದೇಶಕರು(ಆಡಳಿತ)

*ಇವರಿಗೆ,*

1. **ಪ್ರಾಂಶುಪಾಲರು,** ರಾಜ್ಯದ ಎಲ್ಲಾ ಸರ್ಕಾರಿ/ಖಾಸಗಿ ಅನುದಾನಿತ/ಖಾಸಗಿ ಅನುದಾನರಹಿತ ಇಂಜಿನಿಯರಿಂಗ್ ಕಾಲೇಜುಗಳಿಗೆ ಮಾಹಿತಿಗಾಗಿ ಮತ್ತು ಮುಂದಿನ ತುರ್ತು ಕ್ರಮಕ್ಕಾಗಿ.

2. **ಸಂಯೋಜನಾಧಿಕಾರಿಯವರು,** ಇ-ಆಡಳಿತ, ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು